| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 56 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24

Total No. of Questions : 56 ] [ Total No. of Printed Pages : 24

**ಸಂಕೇತ ಸಂಖ್ಯೆ : 85-K** **ವಿಷಯ : ಸಮಾಜ ವಿಜ್ಞಾನ**

**Code No. : 85-K** **Subject : SOCIAL SCIENCE**

(ಕನ್ನಡ ಭಾಷಾಂತರ)

( Kannada Version )

ದಿನಾಂಕ : 16. 04. 2012 ] [ Date : 16. 04. 2012

ಸಮಯ : ಬೆಳಿಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M

ಪರಮಾವಧಿ ಅಂಕಗಳು : 100 ] [ Max. Marks : 100

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 13. | | 25. | | 37. | | 49. | |
| 2. | | 14. | | 26. | | 38. | | 50. | |
| 3. | | 15. | | 27. | | 39. | | 51. | |
| 4. | | 16. | | 28. | | 40. | | 52. | |
| 5. | | 17. | | 29. | | 41. | | 53. | |
| 6. | | 18. | | 30. | | 42. | | 54. | |
| 7. | | 19. | | 31. | | 43. | | 55. | |
| 8. | | 20. | | 32. | | 44. | | 56. | |
| 9. | | 21. | | 33. | | 45. | | × | |
| 10. | | 22. | | 34. | | 46. | | × | |
| 11. | | 23. | | 35. | | 47. | | × | |
| 12. | | 24. | | 36. | | 48. | | × | |
| | | | | | | | | ***Total Marks*** | |

| **Total Marks in words** | | **Grand Total** | |
|---|---|---|---|

| | | | |
|---|---|---|---|
| 1. ✓ | | | |
| 2. ✓ | | ✓ | ✓ |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

8600000 [ Turn over

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 56 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $15 \times 1 = 15$

1. ಎರಡನೇ ಮಹಾಯುದ್ಧದ ವಿಜಯದ ನಾಯಕರುಗಳ ಸರಿಯಾದ ಪಟ್ಟಿಯನ್ನು ಗುರುತಿಸಿ

(A) ಚರ್ಚಿಲ್, ಟ್ರೂಮನ್, ಸ್ಟಾಲಿನ್, ಡಿಗಾಲ್

(B) ಹಿಟ್ಲರ್, ಲೆನಿನ್, ಡಿಗಾಲ್, ಸ್ಟಾಲಿನ್

(C) ಟ್ರೂಮನ್, ಚರ್ಚಿಲ್, ಸ್ಟಾಲಿನ್, ರೂಸ್‌ವೆಲ್ಟ್

(D) ಚರ್ಚಿಲ್, ಲೆನಿನ್, ಸ್ಟಾಲಿನ್, ಡಿಗಾಲ್

*ಉತ್ತರ :* ____________________

2. ಮಹಲ್‌ದಾರ ಪದ್ಧತಿಯ ಮುಖ್ಯ ಲಕ್ಷಣವೆಂದರೆ

   (A) ಜಮೀನಿನ ವಿಸ್ತೀರ್ಣದ ಆಧಾರದ ಮೇಲೆ ಕಂದಾಯ ನಿಗಧಿಪಡಿಸುತ್ತಿದ್ದರು

   (B) ಮಣ್ಣಿನ ಗುಣಮಟ್ಟದ ಆಧಾರದ ಮೇಲೆ ಕಂದಾಯ ನಿಗದಿಪಡಿಸುತ್ತಿದ್ದರು

   (C) ಮಹಲ್‌ದಾರರು ರೈತರ ಜೊತೆಗೂಡಿ ಕಂದಾಯ ಪಾವತಿ ಮಾಡುವ ಜಂಟಿ ಜವಾಬ್ದಾರಿ ಹೊಂದಿದ್ದರು

   (D) ನೀರಾವರಿಯ ಅನುಕೂಲತೆ ಆಧರಿಸಿ ಕಂದಾಯ ನಿಗದಿಪಡಿಸುತ್ತಿದ್ದರು

   *ಉತ್ತರ :* ______________________

3. ಸಂಗೊಳ್ಳಿ ರಾಯಣ್ಣನು ಸೈನ್ಯವನ್ನು ಕಟ್ಟಿ ಇಂಗ್ಲೀಷರ ಮೇಲೆ ದಾಳಿ ಮಾಡಿದ ಉದ್ದೇಶವೆಂದರೆ

   (A) ಬ್ರಿಟೀಷರ ಮೇಲೆ ಸೇಡು ತೀರಿಸಿಕೊಳ್ಳಲು

   (B) ಬ್ರಿಟೀಷರನ್ನು ಭಾರತದಿಂದ ಓಡಿಸಲು

   (C) ತಾನು ಕಿತ್ತೂರಿನ ರಾಜನಾಗಲು

   (D) ರಾಣಿ ಚೆನ್ನಮ್ಮಳ ದತ್ತುಪುತ್ರನನ್ನು ಅರಸನನ್ನಾಗಿ ಮಾಡಲು

   *ಉತ್ತರ :* ______________________

4. ಸರದಾರ ವಲ್ಲಭಭಾಯಿ ಪಟೇಲರು ಸ್ವಾತಂತ್ರ್ಯಾ ನಂತರದ ಭಾರತದ ಇತಿಹಾಸದಲ್ಲಿ ಸ್ಮರಣೀಯರು ಹೇಗೆಂದರೆ, ಅವರು

   (A) ಗೃಹಮಂತ್ರಿಗಳಾಗಿದ್ದರು

   (B) ದೇಶೀಯ ಸಂಸ್ಥಾನಗಳನ್ನು ಭಾರತೀಯ ಒಕ್ಕೂಟಕ್ಕೆ ಸೇರಿಸಿದರು

   (C) ಗೋವಾ ವಿಮೋಚನೆಗೆ ಸಹಾಯ ಮಾಡಿದರು

   (D) ರಾಜ್ಯಗಳ ಪುನರ್ ವಿಂಗಡಣೆ ಮಾಡಿದರು

   *ಉತ್ತರ :* ______________________

5. ರಷ್ಯಾದ ಆರ್ಥಿಕ ಅಭಿವೃದ್ಧಿಗೆ ಸ್ಟಾಲಿನ್ ನೀಡಿದ ಅನುಪಮ ಕೊಡುಗೆ ಇದು

(A) ಪಂಚವಾರ್ಷಿಕ ಯೋಜನೆಗಳ ಜಾರಿ

(B) ಊಳಿಗ ಮಾನ್ಯ ಪದ್ಧತಿಯ ನಿರ್ಮೂಲನ

(C) ಸೇನಾಬಲದ ವೃದ್ಧಿ

(D) ಕಾರ್ಮಿಕ ನೇತೃತ್ವ ಸರ್ಕಾರದ ಸ್ಥಾಪನೆ

ಉತ್ತರ : ____________________

6. ಅನ್ಯಧರ್ಮದ ಜನರ ಬಗ್ಗೆ ಸೈರಣೆ ಇಲ್ಲದಿರುವುದು

(A) ಪ್ರಾಂತೀಯತೆ

(B) ಸಮಾಜವಾದ

(C) ಉದಾರವಾದ

(D) ಕೋಮುವಾದ

ಉತ್ತರ : ____________________

7. 'ಭಾರತದ ಜಾವಾ' ಎಂದು ಕರೆಯಲ್ಪಡುವುದು

(A) ಮುಂಬೈ

(B) ರಾಣಿಗಂಜ್

(C) ಗೋರಖ್‌ಪುರ

(D) ಚೋಟಾನಾಗಪುರ್

ಉತ್ತರ : ____________________

8. ಜೀತ ಪದ್ಧತಿ ರದ್ದುಪಡಿಸಿದ ವರ್ಷ

(A) ಕ್ರಿ.ಶ. 1972

(B) ಕ್ರಿ.ಶ. 1976

(C) ಕ್ರಿ.ಶ. 1978

(D) ಕ್ರಿ.ಶ. 1982

ಉತ್ತರ : ____________________

9. ಗೃಹ ಕೈಗಾರಿಕೆಯ ಮತ್ತೊಂದು ಹೆಸರು

(A) ಗುಡಿ ಕೈಗಾರಿಕೆ

(B) ಉತ್ಪಾದಕ ಕೈಗಾರಿಕೆ

(C) ಸ್ಥಳೀಯ ಕೈಗಾರಿಕೆ

(D) ಸಣ್ಣ ಕೈಗಾರಿಕೆ

ಉತ್ತರ : ____________________

10. ಭಾರತದ ವಾಯುಗುಣದ ಮೇಲೆ ಪಶ್ಚಿಮ ಘಟ್ಟಗಳು ಬೀರಿದ ಪರಿಣಾಮ

(A) ದಟ್ಟ ಕಾಡುಗಳ ಬೆಳವಣಿಗೆಗೆ ಸಹಾಯಕವಾಗಿರುವುದು

(B) ಆಕರ್ಷಕ ಗಿರಿಧಾಮಗಳ ನೀಡಿರುವುದು

(C) ನೈರುತ್ಯ ಮಾನ್‌ಸೂನ್ ಮಾರುತಗಳಿಂದ ಹೆಚ್ಚು ಮಳೆ ಸುರಿಸುವುದು

(D) ವನ್ಯಜೀವಿಗಳಿಗೆ ಆಶ್ರಯ ನೀಡಿರುವುದು

ಉತ್ತರ : ____________________

11. ಮಾನ್ಸೂನ್ ಕಾಡುಗಳ ವಿಶೇಷ ಲಕ್ಷಣವೆಂದರೆ

(A) ಮರಗಳ ಎಲೆಗಳು ಸದಾ ಹಸಿರಾಗಿರುತ್ತವೆ

(B) ಬೇಸಿಗೆ ಆರಂಭದಲ್ಲಿ ಈ ಮರಗಳು ಎಲೆಗಳನ್ನು ಉದುರಿಸುತ್ತವೆ

(C) ಮರಗಳು ಬೀಳಲು ಬೇರುಗಳನ್ನು ಹೊಂದಿರುತ್ತವೆ

(D) ಸಸ್ಯಗಳು ಆಳವಾದ ಬೇರುಗಳನ್ನು ಹೊಂದಿದ್ದು ಕುಬ್ಜವಾಗಿರುತ್ತವೆ.

ಉತ್ತರ : ____________________

12. ಪೆಟ್ರೋಲಿಯಂ ಅನ್ನು 'ದ್ರವರೂಪದ ಚಿನ್ನ' ಎಂದು ಕರೆಯುತ್ತಾರೆ ಏಕೆಂದರೆ

(A) ಅದು ಚಿನ್ನದಂತೆ ಹೊಳೆಯುತ್ತದೆ

(B) ಸಕಲ ಆರ್ಥಿಕ ಚಟುವಟಿಕೆಗಳಲ್ಲಿ ಬಳಕೆಯಾಗುತ್ತದೆ

(C) ಅದು ಚಿನ್ನಕ್ಕಿಂತ ಬೆಲೆಬಾಳುತ್ತದೆ

(D) ಸುಲಭವಾಗಿ ಹೊತ್ತಿಸಬಹುದಾಗಿದೆ

ಉತ್ತರ : ____________________

13. ಸ್ವಾತಂತ್ರ್ಯ ಭಾರತದ ಸಂವಿಧಾನದ ರಚನೆಗೆ ಬಹುಮುಖ್ಯವಾದ ದಾಖಲೆ ಇದು

(A) ರೆಗ್ಯೂಲೇಟಿಂಗ್ ಶಾಸನ

(B) ಪಿಟ್ಸ್ ಇಂಡಿಯಾ ಶಾಸನ

(C) ಮಿಂಟೋ–ಮಾರ್ಲೆ ಸುಧಾರಣೆ

(D) 1935ರ ಭಾರತ ಸರ್ಕಾರದ ಶಾಸನ

ಉತ್ತರ : ____________________

14. ಲೋಕಾಯುಕ್ತ ಸಂಸ್ಥೆಯ ಸ್ಥಾಪನೆಯ ಉದ್ದೇಶವೆಂದರೆ

(A) ಭ್ರಷ್ಟಾಚಾರದ ವಿರುದ್ಧ ಹೋರಾಡಲು

(B) ಕಳ್ಳ ಸಾಗಾಣಿಕೆಯನ್ನು ತಡೆಯಲು

(C) ವರದಕ್ಷಿಣೆಯನ್ನು ನಿಯಂತ್ರಿಸಲು

(D) ಬಡತನ ನಿವಾರಣೆಗೆ

*ಉತ್ತರ :* ____________________

15. 1975 ರಲ್ಲಿ ಜಾರಿಗೆ ಬಂದ ಜೈವಿಕ ಶಸ್ತ್ರಾಸ್ತ್ರ ಒಪ್ಪಂದ (ಬಯಲಾಜಿಕಲ್ ವೆಪನ್ ಕನ್‌ವೆನ್‌ಷನ್) ದ ಉದ್ದೇಶ

(A) ಬಾಹ್ಯಾಕಾಶ ಹಾಗೂ ಸಮುದ್ರದ ತಳಗಳಲ್ಲಿ ಅಣ್ವಸ್ತ್ರ ಪರೀಕ್ಷೆಯನ್ನು ನಿಷೇಧಿಸುವುದು

(B) ಬಾಹ್ಯಾಕಾಶದಲ್ಲಿ ಸೇನಾ ಚಟುವಟಿಕೆಯನ್ನು ನಿಷೇಧಿಸುವುದು

(C) ಅಣ್ವಸ್ತ್ರಗಳನ್ನು ಇತರ ರಾಷ್ಟ್ರಗಳಿಗೆ ಹಂಚುವುದನ್ನು ತಡೆಯಲು

(D) ಜೈವಿಕ ಅಸ್ತ್ರಗಳ ಉತ್ಪಾದನೆ ಮತ್ತು ದಾಸ್ತಾನು ನಿಷೇಧಿಸುವುದು

*ಉತ್ತರ :* ____________________

II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : 5 × 1 = 5

16. ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿ ಆರಂಭವಾದದ್ದು ..........................................................

17. ಪುರಾತನ ಮೆಸೊಪೊಟೇಮಿಯವೇ ಇಂದಿನ ಆಧುನಿಕ ..........................................................

18. ಗ್ರಾಮೀಣ ಮಹಿಳೆಯರ ವಿಕಾಸಕ್ಕೆ ಅನುವು ಮಾಡಿಕೊಡಲು ಹಮ್ಮಿಕೊಂಡಿರುವ ಕಾರ್ಯಕ್ರಮ ......................

..........................................................................................

19. ಕರ್ನಾಟಕದ ಅತಿ ಹೆಚ್ಚು ಮಳೆ ಪಡೆಯುವ ಸ್ಥಳ ..........................................................

20. ನ್ಯಾಯಬೆಲೆ ಅಂಗಡಿಗಳ ಮೂಲಕ ಅಗತ್ಯ ವಸ್ತುಗಳನ್ನು ಪೂರೈಸುವ ಸಲುವಾಗಿ ಸ್ಥಾಪಿಸಿರುವ ನಿಗಮ ..............

..........................................................................................

III. 21. ಈ ಕೆಳಗೆ ಕೊಟ್ಟಿರುವ **A** ಪಟ್ಟಿಯಲ್ಲಿನ ಅಂಶಗಳನ್ನು **B** ಪಟ್ಟಿಯಲ್ಲಿನ ಅಂಶಗಳೊಡನೆ ಹೊಂದಿಸಿ ಬರೆಯಿರಿ : $5 \times 1 = 5$

| ***A* ಪಟ್ಟಿ** | | ***B* ಪಟ್ಟಿ** | |
|---|---|---|---|
| a) | ಆರ್ಯ ಸಮಾಜ | i) | ರಾಜಾ ರಾಮಮೋಹನ್ ರಾಯ್ |
| b) | ಭಾರತೀಯ ಕೌನ್ಸಿಲ್ ಆಕ್ಟ್ | ii) | ತಾರಾಬಾಯಿ ಸಿಂಧೆ |
| c) | ಬ್ರಹ್ಮ ಸಮಾಜ | iii) | ಮಿಂಟೋ–ಮಾರ್ಲೆ |
| d) | ಸ್ತ್ರೀಪುರುಷ ತುಲನ | iv) | ಮತೀಯ ಆಧಾರಿತ ಚುನಾವಣೆ |
| e) | ಮೊದಲ ಗವರ್ನರ್ ಜನರಲ್ | v) | ದಯಾನಂದ ಸರಸ್ವತಿ |
| | | vi) | ಡಾ॥ ಬಿ.ಆರ್. ಅಂಬೇಡ್ಕರ್ |
| | | vii) | ವಾರನ್ ಹೇಸ್ಟಿಂಗ್ಸ್ |
| | | viii) | ಸ್ಪರ್ಧಾತ್ಮಕ ಪರೀಕ್ಷೆಗಳು |

*ಉತ್ತರಗಳು :* a) ______________________

b) ______________________

c) ______________________

d) ______________________

e) ______________________

IV. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : $9 \times 1 = 9$

22. ಫ್ರಾಂಕ್‌ಲಿನ್-ಡಿ-ರೂಸ್‌ವೆಲ್ಟ್ 'ನೂತನ ಯೋಜನೆ'ಯನ್ನು ಜಾರಿಗೊಳಿಸಲು ಕಾರಣವೇನು ?

---

---

23. 'ಪಂಜಾಬಿನ ಸಿಂಹ' ಎಂದು ಯಾರನ್ನು ಕರೆಯಲಾಗಿದೆ ?

---

---

24. ವಿಶ್ವಸಂಸ್ಥೆಯ ಕೇಂದ್ರ ಸ್ಥಾನ ಎಲ್ಲಿದೆ ?

---

---

25. ಮಾನವ ಹಕ್ಕುಗಳನ್ನು ವಿಶ್ವಸಂಸ್ಥೆ ಯಾವಾಗ ಘೋಷಿಸಿತು ?

---

---

26. 'ನನ್ನ ಹೋರಾಟ' (ಮೇನ್ ಕೆಂಫ್) ಪುಸ್ತಕ ಬರೆದವರು ಯಾರು ?

---

---

27. ಅತ್ಯಂತ ಹಳೆಯ ಮತ್ತು ಈಗಲೂ ರೂಢಿಯಲ್ಲಿರುವ ಭಾರತದ ವರ್ತಮಾನ ಪತ್ರಿಕೆ ಯಾವುದು ?

28. 'ಹಸಿರು ಕ್ರಾಂತಿ' ಎಂದರೇನು ?

29. ಭಾರತದ ರಾಷ್ಟ್ರೀಯ ಪಕ್ಷಿ ಯಾವುದು ?

30. ಇತ್ತೀಚಿನ ವರ್ಷಗಳಲ್ಲಿ ಸಾರ್ಕ್‌ನ ಹಿನ್ನಡೆಗೆ ಕಾರಣವೇನು ?

V. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 16 × 2 = 32

31. ಮೂರನೇ ಆಂಗ್ಲೋ-ಮೈಸೂರು ಯುದ್ಧದಿಂದ ಟಿಪ್ಪುವಿನ ಪ್ರಾಬಲ್ಯ ಹೇಗೆ ಕ್ಷೀಣಿಸಿತು ?

32. ಈಸೂರಿನಲ್ಲಿ ನಡೆದ ಕ್ವಿಟ್ ಇಂಡಿಯಾ ಚಳುವಳಿ ಹೇಗೆ ಭಿನ್ನವಾಗಿದೆ ?

33. ನಿರಾಶ್ರಿತರ ಸಮಸ್ಯೆಗಳನ್ನು ಬಗೆಹರಿಸಲು ಭಾರತ ಸರ್ಕಾರ ಕೈಗೊಂಡ ಕ್ರಮಗಳನ್ನು ತಿಳಿಸಿ.

34. ಕೆ. ಶೇಷಾದ್ರಿ ಅಯ್ಯರ್‌ರವರ ಸಾಧನೆಗಳೇನು ?

35. 2ನೇ ಕೊಲ್ಲಿಯುದ್ಧ (ಗಲ್ಫ್ ಯುದ್ಧ) ಕ್ಕೆ ಕಾರಣವೇನು ? ಇದರ ಪರಿಣಾಮವನ್ನು ತಿಳಿಸಿ.

36. ಭಾರತೀಯರಲ್ಲಿ ಆಂಗ್ಲ ಶಿಕ್ಷಣ ರಾಷ್ಟ್ರೀಯತೆಯನ್ನು ಹೇಗೆ ಮೂಡಿಸಿತು ?

37. ವರದಕ್ಷಿಣೆ ಎಂದರೇನು ? ವರದಕ್ಷಿಣೆ ನಿಷೇಧ ಕಾನೂನು ಯಾವಾಗ ಜಾರಿಯಾಯಿತು ?

38. ಯೂರೋಪಿಯನ್ ಕಮ್ಯೂನಿಟಿ ಎಂದರೇನು ? ಇದರ ಮಹತ್ತರ ಸಾಧನೆ ಏನು ?

39. "ಚೀನಾ ಭಾರತದ ವಿರುದ್ಧ ಪ್ರಚೋದನೆಯಿಂದ ಕೂಡಿದ್ದರೂ ಭಾರತ ತನ್ನ ಶಾಂತಿಯುತ ಧೋರಣೆಯನ್ನು ಅನುಸರಿಸುತ್ತಿದೆ' ಎಂದು ಹೇಗೆ ಹೇಳುವಿರಿ ?

40. ಪೂರ್ವ ತೀರ ಮತ್ತು ಪಶ್ಚಿಮ ತೀರಗಳಿಗಿರುವ ವ್ಯತ್ಯಾಸಗಳೇನು ?

41. ಭಾರತ ಯಾವ ಅದಿರಿನ ಉತ್ಪಾದನೆಯಲ್ಲಿ ಏಕಸ್ವಾಮ್ಯತ್ವ ಪಡೆದಿದೆ ? ಆ ಅದಿರಿನ ಉಪಯೋಗಗಳೇನು ?

42. ಸಿಮೆಂಟಿನ ಬಳಕೆ ಒಂದು ದೇಶದ ಅಭಿವೃದ್ಧಿ ಗತಿಯನ್ನು ತಿಳಿಸುತ್ತದೆ. ಹೇಗೆ ?

43. ಇತ್ತೀಚಿನ ದಿನಗಳಲ್ಲಿ ಒಳನಾಡಿನ ಜಲಸಾರಿಗೆ ತನ್ನ ಪ್ರಾಮುಖ್ಯತೆ ಕಳೆದುಕೊಳ್ಳುತ್ತಿದೆ. ಏಕೆ ?

44. ರಾಷ್ಟ್ರ ಸಂಘ ತನ್ನ ಉದ್ದೇಶವನ್ನು ಈಡೇರಿಸಲು ಏಕೆ ವಿಫಲವಾಯಿತು ?

45. ವ್ಯವಸಾಯ ಉತ್ಪಾದನೆ ಹೆಚ್ಚಿಸಲು ಕೈಗಾರಿಕೆಗಳು ಹೇಗೆ ಸಹಕಾರಿಯಾಗಿವೆ ?

46. ನಾಲ್ಕನೇ ಪಂಚವಾರ್ಷಿಕ ಯೋಜನೆ ಕೃಷಿ ಕ್ಷೇತ್ರದಲ್ಲಿ ವಿಫಲವಾಗಲು ಕಾರಣಗಳೇನು ?

VI. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ : 6 × 3 = 18

47. ಮಣ್ಣಿನ ಸವಕಳಿ ತಡೆಯಲು ಕೈಗೊಂಡಿರುವ ಕ್ರಮಗಳಾವುವು ?

48. ಮಿಶ್ರ ಬೇಸಾಯ ಎಂದರೇನು ? ಅದರ ಲಕ್ಷಣಗಳೇನು ?

49. ಪ್ರಾಥಮಿಕ ಶಾಲೆಗಳಿಗೆ ಮಕ್ಕಳನ್ನು ಆಕರ್ಷಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು ?

50. ಪೋರ್ಚುಗೀಸರ ಅವನತಿಗೆ ಕಾರಣಗಳೇನು ?

51. 1857 ರ ದಂಗೆಯ ವಿಫಲತೆಗೆ ಕಾರಣಗಳೇನು ?

52. ಪಂಚವಾರ್ಷಿಕ ಯೋಜನೆಯ ಆರಂಭದಿಂದಲೂ ಭಾರತ ಪಾವತಿ ಹಣ ನೀಡಲು ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಏಕೆ ?

VII. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಉತ್ತರಿಸಿ : $3 \times 4 = 12$

53. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಸುಭಾಷ್‌ಚಂದ್ರ ಬೋಸ್‌ರ ಪಾತ್ರವನ್ನು ವಿವರಿಸಿ.

54. ಭಾರತ ಮತ್ತು ಪಾಕಿಸ್ತಾನಗಳ ಸಂಬಂಧ ಸೌಹಾರ್ದಯುತವಾಗಿಲ್ಲ ಎಂದು ಹೇಗೆ ಹೇಳುವಿರಿ ?

55. ಭಾರತದ ವ್ಯವಸಾಯ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳು ಯಾವುವು ?

VIII. 56. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಕೆಳಗೆ ಕೊಟ್ಟಿರುವುದನ್ನು ಗುರುತಿಸಿ : 1 + 3 = 4

a) ಮುಂಬೈ

b) $82\frac{1}{2}^{\circ}$ ಪೂರ್ವ ರೇಖಾಂಶ

c) ಕಾವೇರಿ ನದಿ

***ಸೂಚನೆ : ಅಂಧ ವಿದ್ಯಾರ್ಥಿಗಳಿಗೆ ಮಾತ್ರ : ಪರ್ಯಾಯ ಪ್ರಶ್ನೆ:*** (ಪ್ರಶ್ನೆ ಸಂಖ್ಯೆ 56ಕ್ಕೆ ಬದಲಾಗಿ)

ಭಾರತದ ಜನಜೀವನದಲ್ಲಿ ಹಿಮಾಲಯದ ಉಪಯೋಗಗಳೇನು ? 4